ದಿಃ 03.09.2025

# ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಳಲ್ಕೆರೆ

## ಸಿ.ಸಿ. ನಂ : 635/2024

ಸಾಕ್ಷಿದಾರರ ಹೆಸರು : ಸುಧಾ ಪಿಡಬ್ಲ್ಯು:01

ಗಂಡನ ಹೆಸರು : ಮಹೇಶ್ ಸಿಡಬ್ಲ್ಯು:01

ವಯಸ್ಸು : 30 ವರ್ಷ

ಉದ್ಯೋಗ : ಮನೆಗೆಲಸ

ವಾಸಸ್ಥಳ : ಕಲ್ಲವ್ವನಾಗತೀಹಳ್ಳಿ ಗ್ರಾಮ ಪ್ರ.ವ.ಬೋ ದಿ.03.09.2025

## ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ.ಯವರಿಂದ

ಆರೋಪಿ ಗೊತ್ತು. ಚಾ.ಸಾಃ 4 ಗೊತ್ತು. ಚಾಸಾ–5 ನನ್ನ ಗಂಡ.

ದಿಃ17.02.2024 ರಂದು ಮಧ್ಯಾಹ್ನ ಸುಮಾರು 01.30 ಗಂಟೆ ಸಮಯದಲ್ಲಿ ಬಿ.ದುರ್ಗದಿಂದ ರಂಗವ್ವನಹಳ್ಳಿ ಗ್ರಾಮಕ್ಕೆ ಹೋಗುವ ದಾರಿಯಲ್ಲಿ ದಾವಣಗೆರೆ ಚಿಕ್ಕಜಾಜೂರು ಪೂರ್ವದ ಅಂಚಿನಲ್ಲಿ ನಾನು ಮತ್ತು ಚಾಸಾ–5 ರವರು ನಮ್ಮ ಕಾರಿನಲ್ಲಿ ಚಿಕ್ಕಜಾಜೂರು ಗ್ರಾಮದ ಕಡೆಗೆ ಹೋಗುತ್ತಿದ್ದಾಗ ನಮ್ಮ ಮಗಳ ಶಾಲಾ ವಾಹನದಲ್ಲಿ ಇದುದ್ದರಿಂದ ನಮ್ಮ ಕಾರನ್ನು ರಸ್ತೆಯ ಎಡಬದಿಯಲ್ಲಿ ನಿಲ್ಲಿಸಿದಾಗ ಕಾರಿನಲ್ಲಿದ್ದ ನಾನು ಕೆಳಗೆ ಇಳಿದು ಹೋಗುತ್ತಿದ್ದಾಗ ಕೆಎ–17–ಎಫ್–1607 ನೇ ನಂಬರಿನ ಕೆ.ಎಸ್.ಆರ್.ಟಿ. ಬಸ್ಸಿನ ಚಾಲಕ ತನ್ನ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಕೆಎ–27–ಸಿ–3268 ನೇ ನಂಬರಿನ ಲಗೇಜ್ ವಾಹನಕ್ಕೆ ಹಿಂದಿನಿಂದ ಗುದ್ದಿದ್ದರಿಂದ ಸದರಿ ಲಗೇಜ್ ವಾಹನದ ಹಿಂದೆ ನಿಂತಿದ್ದ ನಮ್ಮ ಕಾರಿನ ಹಿಂಬದಿಗೆ ಡಿಕ್ಕಿ ಪಡಿಸಿದ್ದರಿಂದ ನಮ್ಮ ಕಾರು ನನಗೆ ತಗುಲಿದ್ದರಿಂದ ನನ್ನ ಬಲ ಮೊಣಕಾಲಿಗೆ, ಎಡಕೈಗೆ ಮತ್ತು ಮೈಕೈಗೆ ಪೆಟ್ಟು ಬಿದ್ದು ಗಾಯಗಳಾಗಿರುತ್ತವೆ.

ತದನಂತರ ನನ್ನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದ್ದು, ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

ನನಗೆ ಈಗ ತೋರಿಸಿದ ನನ್ನ ಹೇಳಿಕೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ತನ್ನ ಹೇಳಿಕೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ–1 ಮತ್ತು ನಿಪಿ–1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ

ದಿ: 03.09.2025

ಆತನೇ ಅಪಘಾತ ವಾದ ದಿನ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಅಪಘಾತ ಪಡಿಸಿರುತ್ತಾರೆ ಎಂದು ನುಡಿದಿರುತ್ತಾರೆ.

**ಪಾಟೀಸವಾಲು ಆರೋಪಿ ಪರ ಶ್ರೀ.ಎಲ್.ಕೆ.ಎಸ್ ವಕೀಲರಿಂದ**

ಅಪಘಾತ ಸಂಭವಿಸಿದ ದಿನ ಕಾರನ್ನು ಚಾಸಾ–5 ರವರು ಚಾಲನೆ ಮಾಡುತ್ತಿದ್ದರು. ನಮ್ಮ ಸ್ವಂತ ಉಪಯೋಗಕ್ಕಾಗಿ ಕಾರನ್ನು ಖರೀದಿಸಿರುತ್ತೇವೆ. ಸದರಿ ಕಾರನ್ನು ಬಾಡಿಗೆಗೆ ನೀಡುವುದಿಲ್ಲ. ನನ್ನ ಗಂಡನಿಗೆ ಚಾಲನ ಪರವಾನಿಗೆ ಇದೆ. ಸದರಿ ದಾಖಲೆಯನ್ನು ನಾವು ಪೊಲೀಸರಿಗೆ ನೀಡಿರುತ್ತೇವೆ. ನನ್ನ ಮಗಳು 1 ನೇ ತರಗತಿಯಲ್ಲಿ ಓದುತ್ತಿದ್ದಳು. ಬಿ.ದುರ್ಗ ಮತ್ತು ರಂಗವ್ವನಹಳ್ಳಿ ಗ್ರಾಮದ ಮಧ್ಯ ಯಾವುದೇ ಬಸ್ ನಿಲ್ದಾಣ ಇಲ್ಲ ಎಂದರೆ ಸರಿ. ಸದರಿ ರಾಜ್ಯ ಸಾರಿಗೆ ರಸ್ತೆಯಾಗಿದೆ ಎಂದರೆ ಸರಿ. ನಾವು ನಿಂತಿದ್ದ ಜಾಗ ನಿಲುಗಡೆಯ ಸ್ಥಳವಾಗಿರಲಿಲ್ಲ ಎಂದರೆ ಸರಿ. ನಾವು ಕಾರನ್ನು ನಿಲ್ಲಿಸಿದಾಗ ಸೂಚನಾ ಲೈಟ್ ಅನ್ನು ಹಾಕಿಕೊಂಡಿದ್ದೇವು. ನಿಪಿ–1 ರ ದಾಖಲೆಯಲ್ಲಿ ಶಾಲಾ ಬಸ್ಸು ಘಟನಾ ಸ್ಥಳದಲ್ಲಿ ನಿಲ್ಲುತ್ತಿದ್ದರ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ಘಟನಾ ಸ್ಥಳದಲ್ಲಿ ನಿಲುಗಡೆಯ ನಿಲ್ದಾಣ ಇಲ್ಲದೇ ಇದ್ದರೂ ಸಹಾ ನಮ್ಮ ಮಗಳನ್ನು ಶಾಲಾ ವಾಹನದಿಂದ ಕರೆದುಕೊಂಡು ಅಜಾಗರೂಕತೆಯಿಂದ ಕಾರನ್ನು ನಿಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಕಾರಿನ ಒಳಗೆ ಕುಳಿತುಕೊಂಡವರಿಗೆ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿ. ಕಾರಿನ ಬಾಗಿಲು ತೆರೆದಿದ್ದರಿಂದ ಅದು ನನಗೆ ತಾಗಿ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವ–ಇಚ್ಚೆಯಿಂದ ಲಗೇಜ್ ವಾಹನ ಬಂದು ನಮ್ಮ ಕಾರಿಗೆ ಗುದಿದ್ದರಿಂದ ನಮಗೆ ಗಾಯಗಳು ಆಗಿರುತ್ತವೆ ಎಂದು ನುಡಿದಿರುತ್ತಾರೆ. ಕಾರು ಮುಂದೆ ಹೋಗುತ್ತಿದ್ದಾಗ ಲಗೇಜ್ ವಾಹನ ಬಂದು ನಮ್ಮ ಕಾರಿಗೆ ಡಿಕ್ಕಿ ಪಡಿಸಿರುತ್ತದೆ. ಲಗೇಜ್ ವಾಹನವು ಮುಖ್ಯ ರಸ್ತೆಯಲ್ಲಿ ಬರುತ್ತಿತ್ತು ಎಂದರೆ ಸರಿ. ರಸ್ತೆಯಲ್ಲಿ ಒಂದಾದ ನಂತರ ಒಂದು ವಾಹನಗಳು ಬರುತ್ತಿರುತ್ತವೆ ಎಂದರೆ ಸರಿ. ಕಾರಿನಿಂದ ಇಳಿದು ರಸ್ತೆಗೆ ಬಂದಿರುವುದು ನನ್ನ ತಪ್ಪು ಎಂದರೆ ಸರಿಯಲ್ಲ. ಲಗೇಜ್ ವಾಹನವು ನಮಗೆ ಡಿಕ್ಕಿ ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕಾರನ್ನು ನಿಲ್ಲಿಸದೇ ಮಗಳನ್ನು ಕರೆದುಕೊಳ್ಳಲು ಕಾರಿನ ಬಾಗಿಲನ್ನು ತೆಗೆದಿದ್ದರಿಂದ ಅದು ನನಗೆ ತಾಗಿ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ನನಗೆ ಆದ ಗಾಯಗಳನ್ನು ನೋಡಲು ಲಗೇಜ್ ವಾಹನದ ಚಾಲಕ ತನ್ನ ವಾಹನವನ್ನು ನಿಲ್ಲಿಸಿದ್ದ ಮತ್ತು ಕೆ.ಎಸ್.ಆರ್.ಟಿ.ಸಿ ವಾಹನದ ಚಾಲಕನಿಂದ ಯಾವುದೇ ಅಪಘಾತ ಸಂಭವಿಸಿರುವುದಿಲ್ಲ ಎಂದರೆ ಸರಿಯಲ್ಲ. ಮೂರನೇ ವ್ಯಕ್ತಿಗೆ ಮಾತ್ರ ನಮ್ಮ ಕಾರಿನ ಇನ್ಸ್‌ರೆನ್ಸ್ ಇದುದ್ದರಿಂದ ನಮಗೆ ಅದು ಬರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಕಾರಿನ ಎಲ್ಲಾ ದಾಖಲಾತಿಗಳನ್ನು ಪೊಲೀಸರಿಗೆ ನಾವು ನೀಡಿರುತ್ತೇವೆ. ಲಗೇಜ್ ವಾಹನವನ್ನು ಸುರೇಶ ಎಂಬುವವರು ಓಡಿಸುತ್ತಿದ್ದು, ಸದರಿ

ದಿಃ 03.09.2025

ವಾಹನದ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. ಕೆ.ಎಸ್.ಆರ್.ಟಿ.ಸಿ ವಾಹನದ ಚಾಲಕನ ತಪ್ಪಿನಿಂದಲಾಗಿಯೇ ಲಗೇಜ್ ವಾಹನ ನಮ್ಮ ಕಾರಿಗೆ ಡಿಕ್ಕಿ ಪಡಿಸಿದ್ದರಿಂದ ನಾನು ಕೇವಲ ಕೆ.ಎಸ್.ಆರ್.ಟಿ.ಸಿ ಬಸ್ ಚಾಲಕನ ವಿರುದ್ಧ ಮಾತ್ರ ದೂರು ದಾಖಲಿಸಿರುತ್ತೇನೆ. ಅಪಘಾತ ಸಂಭವಿಸಿದಾಗ ನಾನು ಕೆಳಗೆ ಬಿದಿದ್ದರಿಂದ ವಾಹನವು ಎಷ್ಟು ದೂರ ಹೋಗಿರುತ್ತದ ಎಂಬುದನ್ನು ನಾನು ಗಮನಿಸಿರುವುದಿಲ್ಲ. ಅಪಘಾತ ಸಂಭವಿಸಿದಾಗ ಶಾಲಾ ವಾಹನವವು ಸ್ವಲ್ಪ ದೂರದಲ್ಲಿ ಮುಂದೆ ಇತ್ತು. ಲಗೇಜ್ ವಾಹನದ ಗಾಡಿಗೆ ಇನ್ಸ್ ರೆನ್ಸ್ ಇದೆಯೋ ಇಲ್ಲವೋ ಮತ್ತು ಅದರ ಚಾಲಕನಿಗೆ ಪರವಾನಿಗೆ ಪತ್ರ ಇದೆಯೋ ಇಲ್ಲವೋ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ.

ಕೆ.ಎಸ್.ಆರ್.ಟಿ.ಸಿ ವಾಹನವು ನೇರವಾಗಿ ನಮ್ಮ ಕಾರಿಗೆ ತಾಗಿರುವುದಿಲ್ಲ ಎಂದರೆ ಸರಿ. ಕೆ.ಎಸ್.ಆರ್.ಟಿ.ಸಿ ವಾಹನ ಲಗೇಜ್ ವಾಹನಕ್ಕೆ ಡಿಕ್ಕಿ ಪಡಿಸಿರುವುದನ್ನು ನಾನು ಖುದ್ದು ನೋಡಿರುವುದಿಲ್ಲ. ನಾನು ಕೆಳಗೆ ಬಿದ್ದು ನಂತರ ಎದ್ದು ನೋಡಿದಾಗ ಕೆ.ಎಸ್.ಆರ್.ಟಿ.ಸಿ ವಾಹನದ ಗ್ಲಾಸ್ ಹೊಡೆದಿತ್ತು. ಘಟನಾ ಸ್ಥಳದ ಚೆಕ್ಕುಬಂದಿ ಹೇಳಲು ಆಗುವುದಿಲ್ಲ. ಘಟನಾ ಸ್ಥಳದಲ್ಲಿ ರಸ್ತೆಯ ಸೂಚನಾ ಫಲಕಗಳು ಯಾವುವು ಇರಲಿಲ್ಲ. ಕೆ.ಎಸ್.ಆರ್.ಟಿ.ಸಿ ವಾಹನದ ಚಾಲಕನ ತಪ್ಪಿನಿಂದ ಯಾವುದೇ ಅಪಘಾತ ಸಂಭವಿಸಿರುವುದಿಲ್ಲ, ನಾವು ಯಾವುದೇ ಸೂಚನೆಯನ್ನು ನೀಡದೇ ಕಾರನ್ನು ನಿಲ್ಲಿಸಿದ್ದರಿಂದ ಲಗೇಜ್ ವಾಹನದ ಚಾಲಕ ನಮ್ಮ ಕಾರಿಗೆ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ನಾನು ನಮ್ಮ ಕಾರಿನಿಂದ ಬಿದ್ದಾಗ ನನಗೆ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಕೆ.ಎಸ್.ಆರ್.ಟಿ.ಸಿ ವಾಹನ ಚಾಲಕನ ಯಾವುದೇ ತಪ್ಪು ಇಲ್ಲದೇ ಇದ್ದರೂ ಸಹಾ ನಮ್ಮ ಕಾರಿಗೆ ಇನ್ಸ್ ರೆನ್ಸ್ ಇಲ್ಲದೇ ಇದ್ದುದರಿಂದ ಆತನ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪರಿಹಾರಕ್ಕಾಗಿ ಕೆ.ಎಸ್.ಆರ್.ಟಿ.ಸಿ ಚಾಲಕನ ವಿರುದ್ಧ ಅರ್ಜಿ ಸಲ್ಲಿಸಿರುವುದಿಲ್ಲ. ಅದೇ ರೀತಿ ನಮ್ಮ ಕಾರಿನ ಇನ್ಸ್ ರೆನ್ಸ್ ಮೂಲಕ ಸಹಾ ಯಾವುದೇ ಹಣವನ್ನು ಪಡೆದುಕೊಂಡಿರುವುದಿಲ್ಲ. ನಿಲುಗಡೆಯ ಸ್ಥಳವು ಇಲ್ಲದೇ ಇದ್ದರು ಸಹಾ ಕಾರನ್ನು ನಿಲ್ಲಿಸಿರುವುದು ನಮ್ಮದೇ ತಪ್ಪು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ :**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ